# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1151(1191) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್.ಪಿ.ಸುಧಾಮ್ ದಾಸ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2010 ರಿಂದ ಇಲ್ಲಿಯವರೆಗೆ ಪರಿಶಿಷ್ಟ ಸಮುದಾಯಕ್ಕೆ ಸೇರಿರುವ ಅರ್ಜಿದಾರರಿಗೆ ಕೆ.ಐ.ಡಿ.ಬಿ. ಯಿಂದ ಹಂಚಿಕೆಯಾಗಿರುವ ನಿವೇಶನಗಳ ಪೈಕಿ ಎಷ್ಟು ನಿವೇಶನಗಳು ನ್ಯಾಯಾಲಯ ವ್ಯಾಜ್ಯದ ಕಾರಣದಿಂದ ಇದುವರೆಗೆ ಸ್ವಾಧೀನ ದೊರಕಿರುವುದಿಲ್ಲ; (ಹಂಚಿಕೆ ದಿನಾಂಕ, ಹಂಚಿಕೆದಾರರ ಹೆಸರು ಹಾಗೂ ನಿವೇಶನಗಳ ಸಂಪೂರ್ಣ ವಿವರ ಒದಗಿಸುವುದು)</td><td>2010 ರಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ನ್ಯಾಯಾಲಯದ ಪ್ರಕರಣ/ ತಕರಾರುಗಳಿರುವುದರಿಂದ ಈ ಕೆಳಕಂಡ ಕೈಗಾರಿಕಾ ಪ್ರದೇಶಗಳಲ್ಲಿ ಕೆಲವು ಹಂಚಿಕೆದಾರರುಗಳಿಗೆ ನಿವೇಶನಗಳ ಸ್ವಾಧೀನ ಪತ್ರ ನೀಡಲು ಸಾಧ್ಯವಾಗಿರುವುದಿಲ್ಲ:<br>
<table>
<tr><th>ಕ್ರ.ಸಂ.</th><th>ಜಿಲ್ಲೆ</th><th>ಕೈಗಾರಿಕಾ ಪ್ರದೇಶ</th></tr>
<tr><td>1</td><td>ಬೆಂಗಳೂರು ನಗರ</td><td>(ಐಟಿ ಸೆಕ್ಟರ್-ಉಪ ಬಡಾವಣೆ) ಹೈಟೆಕ್, ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್ ಫೇಸ್-1</td></tr>
<tr><td>2</td><td>ಬೆಂಗಳೂರು ಗ್ರಾಮಾಂತರ</td><td>ಡಾಬಸ್ ಪೇಟೆ 5ನೇ ಹಂತ ಉಪ ಬಡಾವಣೆ</td></tr>
<tr><td rowspan="2">3</td><td rowspan="2">ರಾಮನಗರ</td><td>ಬಿಡದಿ 2ನೇ ಹಂತ, 2ನೇ ಸೆಕ್ಟಾರ್</td></tr>
<tr><td>ಹಾರೋಹಳ್ಳಿ, 4ನೇ ಹಂತ</td></tr>
<tr><td>4</td><td>ಕೋಲಾರ</td><td>ಜಕ್ಕಸಂದ್ರ</td></tr>
<tr><td>5</td><td>ಹಾಸನ</td><td>ಹಾಸನ ಬೆಳವಣಿಗೆ ಕೇಂದ್ರ ಉಪ ಬಡಾವಣೆ 3 & 4ನೇ ಹಂತ</td></tr>
<tr><td>6</td><td>ಚಿಕ್ಕಬಳ್ಳಾಪುರ</td><td>ಮಸ್ತೇನಹಳ್ಳಿ, 1ನೇ ಹಂತ</td></tr>
<tr><td>7</td><td>ಗದಗ</td><td>ನರಸಾಪುರ</td></tr>
</table>
</td></tr>
<tr><td>ಆ)</td><td>ನ್ಯಾಯಾಲಯ ವ್ಯಾಜ್ಯಗಳಿಂದ ಸ್ವಾಧೀನ ವಿಳಂಬವಾಗಿ ಪರಿಶಿಷ್ಟ ಸಮುದಾಯದ ಹಂಚಿಕೆದಾರರಿಗೆ ಉಂಟಾಗುತ್ತಿರುವ ಅನಾನುಕೂಲ ತಪ್ಪಿಸಲು ಕೆ.ಐ.ಡಿ.ಬಿ.ಯು ಯಾವ ಕ್ರಮ ಕೈಗೊಂಡಿದೆ;</td><td>ಮಂಡಳಿಯು ಸದರಿ ಕೈಗಾರಿಕಾ ಪ್ರದೇಶಗಳಲ್ಲಿನ ನಿವೇಶನಗಳಿಗೆ/ಜಮೀನಿಗೆ ಸಂಬಂಧಿಸಿದಂತೆ ಇರುವ ತಕರಾರು/ ಸಮಸ್ಯೆಗಳನ್ನು ಬಗೆಹರಿಸಲು ಕ್ರಮವಹಿಸುತ್ತಿದ್ದು, ತಕರಾರು ರಹಿತ/ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿ ಸ್ವಾಧೀನ ಪತ್ರವನ್ನು ನೀಡಲು ಕ್ರಮವಹಿಸಲಾಗುತ್ತಿದೆ.<br><br>➢ ದಿನಾಂಕ:05-12-2022ರ SLSWCC ಸಮಿತಿ ಸಭೆಯ ನಿರ್ಣಯದನ್ವಯ, Hitech, Defence and Aerospace Park Phase-1 (IT Sector) ರಲ್ಲಿನ ನಿವೇಶನ ಸಂ:11 ರ ಉಪಬಡಾವಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಒಟ್ಟು 38.81 ಎಕರೆ ಜಮೀನು ಹಂಚಿಕೆ ಮಾಡಲಾಗಿರುತ್ತದೆ.</td></tr>
</table>

| | | |
|---|---|---|
| | | ಸದರಿ ಉಪಬಡಾವಣೆಯಲ್ಲಿನ ಬಿ.ಕೆ. ಪಾಳ್ಯ ಗ್ರಾಮದ ಸರ್ವೆ ನಂ.7 ರಲ್ಲಿ 4 ಎಕರೆ ಜಮೀನಿನ ಭೂಮಾಲೀಕರು ತಮಗೆ ಭೂಪರಿಹಾರ ಪಾವತಿಯಾಗಿರುವುದಿಲ್ಲವೆಂದು ತಡೆಯೊಡ್ಡುತ್ತಿರುತ್ತಾರೆ. ಆದರೆ, ಮಂಡಳಿಯ ದಾಖಲೆಗಳನ್ವಯ ಪರಿಹಾರ ಪಾವತಿಯಾಗಿದ್ದು, ಸಂಬಂಧಪಟ್ಟ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಕಂದಾಯ ಇಲಾಖೆ ತಹಸೀಲ್ದಾರ್ ರವರು ಜಂಟಿಯಾಗಿ ಸರ್ವೆ ನಡೆಸಿ ಸಮಸ್ಯೆ ಬಗೆಹರಿಸಲು ಕ್ರಮವಹಿಸಲಾಗುತ್ತದೆ.<br><br>➢ ದಾಬಸ್ ಪೇಟೆ 5ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ತಕರಾರು/ಕೆರೆ ಅಂಗಳ ಇದ್ದ ಕಾರಣ ವಿನ್ಯಾಸ ನಕ್ಷೆ ಮಾರ್ಪಾಡು ಮಾಡಿ 21 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಬೇರೊಂದು ಸ್ಥಳದಲ್ಲಿ ಹಂಚಿಕೆ ಮಾಡಲಾಗಿದೆ.<br><br>➢ ರಾಮನಗರ ಜಿಲ್ಲೆಯ ಬಿಡದಿ 2ನೇ ಹಂತ, 2ನೇ ಸೆಕ್ಟರ್ ಕೈಗಾರಿಕಾ ಪ್ರದೇಶದಲ್ಲಿ 151 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ 53.57 ಎಕರೆ ಜಮೀನು ಹಂಚಿಕೆ ಮಾಡಿರುತ್ತದೆ. ಈ ಪೈಕಿ ಶಾನಮಂಗಲ ಗ್ರಾಮದಲ್ಲಿ ಬರುವ ಜಮೀನಿನಲ್ಲಿ 48 ಉದ್ದಿಮೆದಾರರಿಗೆ 23.63 ಎಕರೆ ಹಂಚಿಕೆಯಾಗಿದ್ದು, ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಭೂ ಮಾಲೀಕರು ವಿವಿಧ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳನ್ನು ಹೂಡಿದ್ದು ಈ ಕಾರಣಗಳಿಂದ ಹಂಚಿಕೆ ಕ್ರಮ ಮುಂದುವರೆಸಲು ಸಾಧ್ಯವಾಗಿರುವುದಿಲ್ಲ.<br><br>ಮಂಡಳಿಯ ವತಿಯಿಂದ ಭೂ ಮಾಲೀಕರನ್ನು ಮನವೊಲಿಸಲು ಪ್ರಯತ್ನಿಸಲಾಗುತ್ತಿದ್ದು ಹಾಗೂ ನ್ಯಾಯಾಲಯದಲ್ಲೂ ಮಂಡಳಿಯ ಪರ ಪ್ರಕರಣ ಇತ್ಯರ್ಥ ಪಡಿಸಲು ಕ್ರಮವಹಿಸಲಾಗುತ್ತಿದೆ.<br><br>➢ ಹಾರೋಹಳ್ಳಿ 4ನೇ ಹಂತ ಕೈಗಾರಿಕಾ ಪ್ರದೇಶಕ್ಕೆ ಪರಿಸರ ವಿಮೋಚನಾ ಪತ್ರ ಪಡೆಯುವ ಸಂಬಂಧಿಸಿದಂತೆ ಸಮಸ್ಯೆ ಇರುವುದರಿಂದ ಯಾವುದೇ ಹಂಚಿಕೆದಾರರಿಗೆ ಸ್ವಾಧೀನ ಪತ್ರ ನೀಡಿರುವುದಿಲ್ಲ.<br><br>➢ ಹಾಸನ ಜಿಲ್ಲೆ, ಹಾಸನ ಬೆಳವಣಿಗೆ ಕೇಂದ್ರ ಉಪಬಡಾವಣೆ-3ರ ಕೈಗಾರಿಕಾ ಪ್ರದೇಶದ ರಲ್ಲಿ 10 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ 7.22 ಎಕರೆ ಜಮೀನು ಹಂಚಿಕೆ ಮಾಡಿರುತ್ತದೆ. ಸದರಿ ಉಪಬಡಾವಣೆಯಲ್ಲಿ ಬರುವ ಚಿಕ್ಕಬಸವನಹಳ್ಳಿ ಗ್ರಾಮದ ಗ್ರಾಮಸ್ಥರು ಭೂಸ್ವಾಧೀನವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No.41052/2012 ಮತ್ತು WP No.5385/2020 ದಾಖಲಿಸಿದ್ದು, 2024 ರಲ್ಲಿ ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಳಿಸಲಾಗಿದೆ. ಜಮೀನಿನ ತಕರಾರಿನ ಕಾರಣ ಹಂಚಿಕೆದಾರರಿಗೆ ಸ್ವಾಧೀನ ಪತ್ರವನ್ನು ನೀಡಿರುವುದಿಲ್ಲ.<br><br>ಹಾಸನ ಬೆಳವಣಿಗೆ ಕೇಂದ್ರ ಉಪಬಡಾವಣೆ-3ರ ಕೈಗಾರಿಕಾ ಪ್ರದೇಶದ ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ದಿನಾಂಕ:19-05-2025ರ ಮಂಡಳಿ ಸಭೆಯಲ್ಲಿ ಅನುಮೋದಿಸಲಾಗಿದ್ದು, ಅದರಂತೆ |

<table>
<tr><td></td><td></td><td>ಅಭಿವೃದ್ಧಿಪಡಿಸಿದ ನಂತರ ಸ್ವಾಧೀನ ಪತ್ರ ನೀಡಲಾಗುತ್ತದೆ.<br><br>➢ ಹಾಸನ ಜಿಲ್ಲೆಯ, ಹಾಸನ ಬೆಳವಣಿಗೆ ಕೇಂದ್ರ 4ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ತಕರಾರಿದ್ದ ಕಾರಣ ಹಾಸನ ಬೆಳವಣಿಗೆ ಕೇಂದ್ರ 5ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಪರ್ಯಾಯವಾಗಿ ನಿವೇಶನ ಹಂಚಿಕೆ ಮಾಡಲಾಗಿದೆ.<br><br>➢ ಹಾಸನ ಬೆಳವಣಿಗೆ ಕೇಂದ್ರ ಉಪಬಡಾವಣೆ-4ರಲ್ಲಿ ಮಂಡಳಿಯು 24 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ 18.20 ಎಕರೆ ಜಮೀನನ್ನು ಹಂಚಿಕೆ ಮಾಡಿರುತ್ತದೆ.<br><br>ಸದರಿ ಉಪ ಬಡಾವಣೆಯಲ್ಲಿ ಕೌಶಿಕ ಗ್ರಾಮದ 72 ಎಕರೆ ಗೋಮಾಳ ಜಮೀನು ಸೇರಿದ್ದು, ಕೌಶಿಕ ಗ್ರಾಮದ ಗ್ರಾಮಸ್ಥರು ಗೋಮಾಳ ಜಮೀನಿನಲ್ಲಿ ಆಶ್ರಯ ಬಡಾವಣೆ ನಿರ್ಮಿಸಿರುವ 12 ಎಕರೆ ಜಮೀನನ್ನು ಹಾಸನ ಜಿಲ್ಲಾಧಿಕಾರಿಗಳಿಗೆ ವರ್ಗಾಯಿಸಲು ಕೋರಿರುತ್ತಾರೆ ಹಾಗೂ ಹಂಚಿಕೆದಾರರಿಗೆ ಯೋಜನೆ ಪ್ರಾರಂಭಿಸಲು ತಡೆಯೊಡ್ಡುತ್ತಿರುತ್ತಾರೆ. ಸದರಿ ಗ್ರಾಮಸ್ಥರು 12 ಎಕರೆ ಜಮೀನನ್ನು ಆಶ್ರಯ ಬಡಾವಣೆಗೆ ನೀಡಲು ಕೋರುತ್ತಿರುವ ಹಿನ್ನಲೆಯಲ್ಲಿ, ಮುಂದಿನ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ.<br><br>ಪ್ರಸ್ತುತ, ಸದರಿ ಉಪಬಡಾವಣೆಯಲ್ಲಿ ಹಂಚಿಕೆಯಾದ ಎಲ್ಲಾ ಉದ್ದಿಮೆದಾರರಿಗೆ ಸ್ವಾಧೀನ ಪತ್ರ ನೀಡಲಾಗಿದೆ.<br><br>➢ ಚಿಕ್ಕಬಳ್ಳಾಪುರ ಜಿಲ್ಲೆ, ಮಸ್ತೇನಹಳ್ಳಿ 1ನೇ ಹಂತ ಕೈಗಾರಿಕಾ ಪ್ರದೇಶದ ಜಮೀನಿನಲ್ಲಿ ತಕರಾರು/ಡೀಮ್ಡ್ ಅರಣ್ಯ ಪ್ರದೇಶದ ಕಾರಣ ನಿವೇಶನಗಳಿಗೆ ಸ್ವಾಧೀನ ಪತ್ರ ನೀಡಲು ಸಾಧ್ಯವಾಗದ ಕಾರಣ ದಿನಾಂಕ:26-11-2024 ರಂದು ಮಂಡಳಿಯಲ್ಲಿ ಸದರಿ ಕೈಗಾರಿಕಾ ಪ್ರದೇಶದ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದಿಸಿದ್ದು, ಅದರಂತೆ ಅಭಿವೃದ್ಧಿಪಡಿಸಿದ ನಂತರ ಸ್ವಾಧೀನ ಪತ್ರ ನೀಡಲಾಗುತ್ತದೆ.<br><br>➢ ಗದಗ ಜಿಲ್ಲೆ, ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಹಂಚಿಕೆ ಪಡೆದ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದ ಓರ್ವ ಉದ್ದಿಮೆದಾರರಿಗೆ ನಿವೇಶನದಲ್ಲಿ ತಕರಾರು ಇದ್ದ ಕಾರಣ ಪರ್ಯಾಯವಾಗಿ ದಾವಣಗೆರೆ ಜಿಲ್ಲೆಯ ಹನಗವಾಡಿ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಹಂಚಿಕೆ ಮಾಡಲಾಗಿದೆ.</td></tr>
<tr><td>ಇ.</td><td>ನ್ಯಾಯಾಲಯ ವ್ಯಾಜ್ಯದಿಂದ ಮುಕ್ತವಾಗಿದ್ದರೂ ಪರಿಶಿಷ್ಟ ಸಮುದಾಯದ ಅನೇಕ ಹಂಚಿಕೆದಾರರಿಗೆ ಇದುವರೆಗೂ ನಿವೇಶನಗಳ ಸ್ವಾಧೀನ ದೊರಕಿಸಿಕೊಡಲು ಕೆಐಡಿಬಿ ಅಧಿಕಾರಿಗಳು ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಮಂಡಳಿಯು ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದಡಿ ಹಂಚಿಕೆ ಮಾಡಿರುವ ತಕರಾರು ರಹಿತ ನಿವೇಶನಗಳಿಗೆ ನಿಯಮಾನುಸಾರ ಸ್ವಾಧೀನ ಪತ್ರ ನೀಡಲಾಗುತ್ತಿದೆ.</td></tr>
<tr><td>ಈ.</td><td>ಪರಿಶಿಷ್ಟ ಸಮುದಾಯಕ್ಕೆ ಸೇರಿರುವ ಹಂಚಿಕೆದಾರರಿಗೆ ನಿವೇಶನ ಹಂಚಿಕೆಯಾದ ಹಲವಾರು ವರ್ಷಗಳ ನಂತರವೂ ಹಾಗೂ ಸದರಿ ನಿವೇಶನಗಳು ನ್ಯಾಯಾಲಯದ</td></tr>
</table>

| | | |
|---|---|---|
| | ವ್ಯಾಜ್ಯಗಳಿಂದ ಮುಕ್ತವಾಗಿದ್ದರೂ ಹಂಚಿಕೆದಾರರಿಗೆ ನಿವೇಶನಗಳ ಸ್ವಾಧೀನ ಕೊಡಿಸುವಲ್ಲಿ ವಿಫಲರಾಗಿರುವ ಹಾಗೂ ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ? | |

**ಸಂಖ್ಯೆ:ಸಿಐ 176 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು